ಉಳಿದ ಹಣವನ್ನು ರೈತರು ಸಹಕಾರೀ ಸಾಲ ಸಂಸ್ಥೆಗಳಿಂದ ತೆಗೆದುಕೊಂಡ ಅಲ್ಪಾವಧಿ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಿದುದರಿಂದ ಉಂಟಾದ ನಷ್ಟವನ್ನು ಭರಿಸಲು ಉಪಯೋಗಿಸಲಾಗಿದೆ.

ಅ) ಉದ್ಭವಿಸುವುದಿಲ್ಲ.

ಆ) ಇಲ್ಲ

ಈ) ಉದ್ಭವಿಸುವುದಿಲ್ಲ.

ಉ) ಹಿಂದಿನ ವರ್ಷದ ಅನುದಾನವನ್ನು ಪೂರ್ತಿಯಾಗಿ ಬಿಡುಗಡೆ ಮಾಡಲಾಗಿದೆ.

ಊ) ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಯ ಪ್ರಕಾರ, ಹಣವನ್ನು ಬಳಸಿಕೊಳ್ಳಲಾಗಿದೆ.

ತುರುವೇಕೆರೆ ತಾಲ್ಲೂಕಿನಲ್ಲಿ ಬಸ್ ಸೌಲಭ್ಯ

1373 (926) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ತುರುವೇಕೆರೆ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ಮಾಯಸಂದ್ರ ಹೋಬಳಿ, ಮಡಮರ ಗಟ್ಟ, ಕಪ್ಪರ, ಅಂಗಡಿಗೆರೆ, ದೊಡ್ಡ ಮಾರ್ಗೋನಹಳ್ಳಿಗೆ ಸ್ವತಂತ್ರ್ಯ ಬಂದು 54 ವರ್ಷ ಕಳೆದರೂ ಬಸ್ ಸೌಲಭ್ಯ ಇಲ್ಲದೆ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಬಸ್ ಸೌಕರ್ಯ ಒದಗಿಸದಿರಲು ಕಾರಣವೇನು;

ಇ) ಅನೇಕ ವರ್ಷಗಳಿಂದ ಬೇಡಿಕೆ ಇದ್ದರೂ, ಸರ್ಕಾರ ಸ್ಪಂದಿಸದೇ ಇರಲು ಕಾರಣವೇನು;

ಈ) ಈ ಗ್ರಾಮಗಳಿಗೆ ಕೂಡಲೇ ವಾಹನ ಸೌಲಭ್ಯ ಒದಗಿಸಲು ಕೈಗೊಳ್ಳುವ ಕ್ರಮಗಳೇನು;

ಉ) ಎಂದಿನಿಂದ ಪ್ರಾರಂಭಿಸಲಾಗುವುದು;

ಶ್ರೀ ಬಿ. ರಮಾನಾಥ ರೈ (ಸಾರಿಗೆ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಈ ವಿಚಾರವಾಗಿ ಇದುವರೆವಿಗೂ ಸಂಸ್ಥೆಗೆ ಯಾವುದೇ ಬೇಡಿಕೆಗಳು ಬಂದಿರುವುದಿಲ್ಲ.

ಈ) ಸದರಿ ಗ್ರಾಮಗಳಿಗೆ ರಸ್ತೆಯನ್ನು ಅಗಲಗೊಳಿಸಿ ಭಾರಿ ವಾಹನಗಳ ಓಡಾಟಕ್ಕೆ ಯೋಗ್ಯಗೊಳಿಸಿದ ನಂತರ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗುವುದು.

ಉ) ಮೇಲಿನಂತೆ.

ತುರುವೇಕೆರೆ ತಾಲ್ಲೂಕಿಗೆ ಎ.ಪಿ.ಡಿ.ಆರ್.ಪಿ ಯೋಜನೆ

1374 (927) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ತುರುವೇಕೆರೆ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ವೋಲ್ಟೇಜ್ ಕೊರತೆ ಹಾಗೂ ಸಮರ್ಪಕ ವಿದ್ಯುತ್ ಇಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಸಮಸ್ಯೆಗಳನ್ನು ನಿವಾರಣೆ ಮಾಡಲು ಹಾಕಿಕೊಂಡಿರುವ ಕಾರ್ಯಕ್ರಮವೇನು?

ಇ) ಎ.ಪಿ.ಡಿ.ಆರ್.ಪಿ.ಯೋಜನೆ ಮುಖಾಂತರ ಈ ಸಮಸ್ಯೆಗಳನ್ನು ನಿವಾರಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?

ಈ) ಈ ಯೋಜನೆಯಲ್ಲಿ ತುರುವೇಕರೆ ತಾಲ್ಲೂಕನ್ನು ಸೇರಿಸಲಾಗಿದೆಯೇ?

ಉ) ಯಾವಾಗಿನಿಂದ ಈ ಯೋಜನೆ ಕೈಗೆತ್ತಿಕೊಳ್ಳಲಾಗುವುದು?

ಊ) ತಕ್ಷಣ ಪ್ರಾರಂಭ ಮಾಡಿ ಜನರ ಸಮಸ್ಯೆ ನಿವಾರಣೆ ಮಾಡಲಾಗುವುದೇ?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಹೌದು, ಸರ್ಕಾರದ ಗಮನಕ್ಕೆ ಬಂದಿದೆ.

ಆ) ವೋಲ್ಟೇಜ್ ಕೊರತೆ ನೀಗಿಸುವ ಸಲುವಾಗಿ ದಬ್ಬೆಘಟ್ಟ ಬಿನಗೋನಹಳ್ಳಿ, ಚಿಕ್ಕಬಿನಕನಹಳ್ಳಿ ಕೊಂಡಜ್ಜಿ ಅಮಗಾರಕನಹಳ್ಳಿ ಗ್ರಾಮಗಳಿಗೆ ಹೊಂದುವಂತೆ 12.4 ಕಿ.ಮೀ . 11. ಕೆ.ವಿ. ಲಿಂಕ್ ಲೈನ್ ಎಕ್ಸ್‌ಪ್ರೆಸ್ ಲೈನ್‌ಗಳನ್ನು 2002-03ನೇ ಸಾಲಿನಲ್ಲಿ ನಿರ್ಮಿಸಲಾಗಿದ್ದು, ವೋಲ್ಟೇಜ್‌ನಲ್ಲಿ ಸುಧಾರಣೇ ಕಂಡುಬಂದಿದೆ. ಉಳಿದಂತೆ ಸಿದ್ದನಹಟ್ಟಿ ಹಾಗೂ ಶೆಟ್ಟರಪಾಳ್ಯಕ್ಕೆ ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸಲು ಅಂದಾಜು ಪಟ್ಟಿ ಸಲ್ಲಿಸಲಾಗುತ್ತಿದೆ (1.75. ಕಿ.ಮೀ. 11 ಕೆ.ವಿಲ ಲೈನ್) ಅನೇಕರೆಪಾಳ್ಯಕ್ಕೆ ಹೊಸದಾಗಿ ಪರಿವರ್ತಕವನ್ನು ಅಳವಡಿಸುವ ಸಲುವಾಗಿ 1 ಕಿ.ಮೀ. 11. ಕೆ.ವಿ. ಲೈನ್‌ಗೆ ಅಗತ್ಯವಿರುವ ಕಾಮಗಾರಿ ಅಂದಾಜು ಪಟ್ಟಿ ತಯಾರಿಸಲಾಗುತ್ತಿದೆ.

ಮಣಿಚಂದ್ರಗಿರಿನಿಂದ ಶೆಟ್ಟಿ ಗೊಂಡನಪಾಳ್ಯದವರೆಗೆ 4.6 ಕಿ.ಮೀ ಲಿಂಕ್ ಲೈನ್ ಕಾಮಗಾರಿಯು ಪ್ರಗತಿಯಲ್ಲಿದೆ. 11. ಕೆ.ವಿ. ಲೈನ್ ಅಗತ್ಯವಿರುವ ಕಾಮಗಾರಿಗಾಗಿ ಅಂದಾಜು ಪಟ್ಟಿ ತಯಾರಿಸಲಾಗುತ್ತಿದೆ. ಸಂಪಿಗೆಯಿಂದ ಹಳೆಸಂಪಿಗೆಗೆ 1.3 ಕಿ.ಮೀ 11 ಕೆ.ವಿ. ಲೈನ್ ನಿರ್ಮಾಣ ಕೆಲಸ ಪ್ರಗತಿಯಲ್ಲಿದೆ.

ಇ) ಹೌದು, ತ್ವರಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣೆ ಯೋಜನೆ ಮುಖಾಂತರ ಈ ಸಮಸ್ಯೆಗಳನ್ನು ನಿವಾರಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ. ಯೋಜನೆಯ ವಿವರಗಳನ್ನು ತಯಾರಿಸಿ ಇದನ್ನು ಸಿಇಎ: ಎಂಒಪಿ ಗೆ ಕಳುಹಿಸಲಾಗುವುದು.

ಈ) ಈ ಯೋಜನೆಯಲ್ಲಿ ತುರುವೆಕೆರೆ ತಾಲ್ಲೂಕನ್ನು ಸೇರಿಸುವ ಪ್ರಸ್ತಾವನೆಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಸಲ್ಲಿಸಲಾಗಿದೆ.

ಉ) ಮೇಲಿನ ಪ್ರಸ್ತಾವನೆಗೆ ಅನುಮೋದನೆ ದೊರೆತ ನಂತರ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುತ್ತದೆ.

ಊ) ಅನುಮೋದನೆ ದೊರೆತ ನಂತರ ನಿಗಮ ನಿಯಮಾವಳಿಗನುಸಾರವಾಗಿ ಕೆಲಸವನ್ನು ಏಜೆನ್ಸಿಗೆ ವಹಿಸಿದ ನಂತರ ಪ್ರಾರಂಭಿಸಲಾಗುವುದು.

ಶಿಕಾರಿಪುರ ತಾಲ್ಲೂಕಿನಲ್ಲಿ ವಿದ್ಯುತ್ ಲೈನ್‌ಗಳ ನಿರ್ಮಾಣ

1375 (884) ಶ್ರೀ ಮಹಾಲಿಂಗಪ್ಪ ಬಿ.ಎನ್. (ಶಿಕಾರಿಪುರ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕಾರಿಪುರ, ಕೊರಟಗೆರೆ ಶೆಟ್ಟರಹಳ್ಳಿ ಈಸೂರುಗಳಲ್ಲಿ ವಿದ್ಯುತ್ ಲೈನ್ ಕಾಮಗಾರಿ ಕೆಲಸ ಪ್ರರಂಭವಾಗದಿರಲು ಕಾರಣವೇನು?

ಆ) ಮೇಲ್ಕಂಡ ಕಾಮಗಾರಿಗಳು ಎಂದಿನಿಂದ ಪ್ರಾರಂಭವಾಗುತ್ತವೆ.?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು) :